**ಸಾಕ್ಷಿಗೆ ದಿನಾಂಕಃ23-09-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಪಾಟೀ ಸವಾಲು:: ಆರೋಪಿ ಪರ ಶ್ರೀ. K.C.C ವಕೀಲರಿಂದ::**

1. ನಾನು ತೋಟದ ಕೆಲಸ ಮಾಡಿಕೊಂಡಿರುತ್ತೇನೆ. ಆರೋಪಿ ಚಿಕ್ಕಮಗಳೂರು ಜಿಲ್ಲೆಯವರಾಗಿರುವುದಿಲ್ಲ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಕಾಣಿಸಿರುವ ಅಮೋಘ ಅಗ್ರಿಟೆಕ್ ಕೃಷಿ ಯಂತ್ರೋಪಕರಣ ಮಾರಾಟ ಮಳಿಗೆಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಅಂಗಡಿಗೆ ಯಾವತ್ತೂ ಸಹ ಆರೋಪಿ ಮಾಲೀಕರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಆರೋಪಿಯ ಅಂಗಡಿ ನ.ರಾ.ಪುರ ತಾಲ್ಲೂಕಿನ ಕೈಮರದಲ್ಲಿ ಇರುತ್ತದೆ. ಈಗ ನಾನು ಹೇಳುತ್ತಿರುವ ವಿಚಾರವನ್ನು ಪಿರ್ಯಾದಿಯಲ್ಲಾಗಲೀ ಅಥವಾ ನಿಪಿ-3 ನೋಟೀಸಿನಲ್ಲಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನ.ರಾ.ಪುರ ಹಾಗೂ ಬಿ.ಹೆಚ್. ಕೈಮರ ದ ನಡುವೆ 4 ಕಿ.ಮೀ ಅಂತರವಿರುತ್ತದೆ ಎಂದರೆ ಸರಿ. ನ.ರಾ.ಪುರ ಮತ್ತು ಬಿ.ಹೆಚ್. ಕೈಮರವು ಬೇರೆ ಬೇರೆ ಅಂಚೆ ಕಛೇರಿಗಳ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಅವೆರಡು ಒಂದೇ ಪಟ್ಟಣಕ್ಕೆ ಸೇರಿರುತ್ತದೆ ಎಂದು ನುಡಿದಿರುತ್ತಾರೆ. ನ.ರಾ.ಪುರ ಪಟ್ಟಣವಾಗಿದ್ದು ಮತ್ತು ಬಿ.ಹೆಚ್. ಕೈಮರವು ಗ್ರಾಮವಾಗಿರುತ್ತದೆ ಮತ್ತು ನಾನು ಹೇಳುವಂತೆ ಅವರೆಡು ಒಂದೇ ಪಟ್ಟಣದಲ್ಲಿ ಬರುವ ಸ್ಥಳಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

2. ಆರೋಪಿಯು ನನಗೆ ಸುಮಾರು 2020 ರಲ್ಲಿ ಪರಿಚಯ ಆಗಿರುತ್ತಾರೆ. ನಾನು ಆರೋಪಿಗೆ ಸಾಲ ಕೊಟ್ಟಿರುತ್ತೇನೆ ಎನ್ನುವ ಸಮಯದಲ್ಲಿ ಅವರು ಮೇಲೆ ಹೇಳಿದ ಅಮೋಘ ಅಗ್ರಿಟೆಕ್ ಕೃಷಿ ಯಂತ್ರೋಪಕರಣ ಮಾರಾಟ ಮಳಿಗೆಯನ್ನು ನಡೆಸುತ್ತಿದ್ದರು. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಮತ್ತೊಬ್ಬರಿಗೆ ಸಾಲವನ್ನು ಕೊಡುವಾಗ ಯಾವ ಉದ್ದೇಶಕ್ಕೆ ಮತ್ತು ಆತನ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಂಡೇ ಸಾಲವನ್ನು ಕೊಡುತ್ತಾರೆ ಎಂದರೆ ಸರಿ. ನಾನು ಹೇಳುತ್ತಿರುವ ಅಮೋಘ ಅಗ್ರಿಟೆಕ್ ಕೃಷಿ ಯಂತ್ರೋಪಕರಣ ಮಾರಾಟ ಮಳಿಗೆಯ ಹೆಸರಿನಲ್ಲಿ ಯಾವುದೇ ಪರವಾನಗಿ ಇರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಮಳಿಗೆಯು ಆರೋಪಿಗೆ ಸಂಬಂಧಿಸಿದ್ದೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮಳಿಗೆ ಇದ್ದ ಕಟ್ಟಡವು ಆರೋಪಿಯು ಬಾಡಿಗೆಗೆ

ಪಡೆದುಕೊಂಡಿದ್ದರು ಎಂದು ನಾನು ವಿಚಾರಿಸಿ ತಿಳಿದುಕೊಂಡಿರುತ್ತೇನೆ. ಸಾಮಾನ್ಯವಾಗಿ ಯಾವುದೇ ಒಂದು ಮಳಿಗೆ ಕಟ್ಟಡವನ್ನು ಅದರ ಮಾಲೀಕರು ಅಭಿವೃದ್ಧಿ ಪಡಿಸುತ್ತಾರೆ ಹೊರತು, ಬಾಡಿಗೆಯಲ್ಲಿ ಇರುವವರು ಅಭಿವೃದ್ಧಿ ಪಡಿಸುವುದಿಲ್ಲ ಎಂದರೆ ಸಾಕ್ಷಿಯು ನಾನು ಕಟ್ಟಡದ ಅಭಿವೃದ್ಧಿಗೆಂದು ಸಾಲವನ್ನು ನೀಡಿರುವುದಿಲ್ಲ ಅವರ ವ್ಯವಹಾರದ ಅಭಿವೃದ್ಧಿಗೆ ಸಾಲವನ್ನು ಆರೋಪಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ವಿಚಾರವನ್ನು ನಾನು ನನ್ನ ಪಿರ್ಯಾದಿಯಲ್ಲಾಗಲೀ ಅಥವಾ ನಿಪಿ-3 ನೋಟೀಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಸಾಲವನ್ನು ಪಡೆಯುವಾಗ ನಾನು ಹೇಳುತ್ತಿರುವಂತೆ 3,25,000/- ಪಡೆಯಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಕೃಷಿ ಕೆಲಸವನ್ನು ಮಾಡುತ್ತಿರುವ ಬಗ್ಗೆ ಈ ವರೆಗೂ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ನನಗೆ ಕೇವಲ 1 ವರ್ಷದಿಂದ ಪರಿಚಯ ಇರುತ್ತಾರೆ ಎನ್ನುವ ವ್ಯಕ್ತಿಗೆ ನಾನು ಹೇಳುವಂತೆ 3.25 ಲಕ್ಷ ನಷ್ಟು ದೊಡ್ಡ ಮೊತ್ತದ ಹಣವನ್ನು ನಾನು ನೀಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಕೃಷಿಗೆಂದು ಅಡಿಕೆ ಸುಲುಯುವ ಯಂತ್ರ ಮತ್ತು ಅಡಿಕೆ ಪಾಲಿಶ್ ಯಂತ್ರ ಗಳು ಇರುತ್ತದೆ. ಯಾವುದಾದರೂ ಯಂತ್ರಗಳನ್ನು ಖರೀದಿಸುವ ಪೂರ್ವದಲ್ಲಿ ಕೊಟೇಶನ್ ನೀಡಲಾಗುತ್ತದೆ ಮತ್ತು ಖರೀದಿಯ ನಂತರ ರಸೀದಿಯನ್ನು ಸಹ ನೀಡಲಾಗುತ್ತದೆ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

**(ದಿನಾಂಕಃ23-09-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಸಹಿ/-

**ಪ್ರ.ದ.ನ್ಯಾ.ದಂಃ ಶೃಂಗೇರಿ .**